೧೧-೦೦ ಎ. ಎಂ.

ಅಧ್ಯಕ್ಷರು.—ಫೈನ್‌ಲೈಸ್ ಆಗಿರುವುದರಿಂದ ಮತ್ತೆ ಸೇರಿಸಲು ಬರುವುದಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

ಶ್ರೀ ಬಿ. ವಿ ರಾಮಚಂದ್ರ ರೆಡ್ಡಿ.— ಮಾನ್ಯ ಅಧ್ಯಕ್ಷರೇ, ಇನ್ನೂ ಫೈನಲೈಸ್ ಆಗಿಲ್ಲ. ಏನೂ ಪ್ರೊಗ್ರೆಸ್ ಕೂಡ ಇಲ್ಲ. ಫೈನಲೈಸ್ ಆಗಿದ್ದರೆ ತೊಂದರೆ ಏನು ಎನ್ನುವುದು ಸರ್ಕಾರಕ್ಕೆ ಅರ್ಥವಾಗುತ್ತಿತ್ತು.

ಶ್ರೀ ಎ. ಬಿ. ಜಕನೂರ್.— ಮಾನ್ಯ ಅಧ್ಯಕ್ಷರೇ, ಎಕ್ಸಾಮಿನೇಷನ್ಸ್ ಈಗಾಗಲೇ ಕಂಡೆಕ್ಟ್ ಮಾಡಿರುವುದರಿಂದ ಮತ್ತೆ ಮಾಡಲಿಕ್ಕೆ ಬರುವುದಿಲ್ಲ.

MR. SPEAKER — The hon. Member was making a very serious point. ೬೮ ನಂಬರ್ ಮೇಲೆ ಬಂದಿರುವವರಿಗೆ ೪೦, ೪೦ ನಂಬರ್ ಬಂದಿರುವವರಿಗೆ ೩೦ ನಂಬರ್ ಬಂದಿರುತ್ತದೆ ಎಂದು ಹೇಳುತ್ತಾರೆ.

SRI A.B. JAKANUR —That will be looked into. Moreover there are Committees consisting of non-official Members also.

MR. SPEAKER.— Hon. Member Sri Ramachandra Reddy, you can discuss with the hon. Minister afterwards.

(iii) ENHANCEMENT OF THE HOUSE RATES CONSTRUCTED IN BEERANAHALLI TANK AREA, HASSAN CITY UNDER HUDCO SCHEME

SRI K. H. HANUME GOWDA.— Sir, I call the attention of the hon. Minister for Housing and Urban Development regarding the Karnataka Housing Board for having arbitrarily and abruptly enhanced the House rates constructed in Beeranahally Tank area, Hassan City, under HUDCO Scheme and caused hardship to Higher Income Group, MIG. and LIG.

SRI DHARAM SINGH (Minister for Housing and Urban Development) — Sir, I wish to make the following statement.

The Housing Scheme for the construction of 500 EWS Houses. 240 LIG Houses, 80 MIG. Houses, and formation of 10 LIG 40 MIG, 80 HIGH sites and 40 Shops was prepared by the Karnataka Housing Board with HUDCO assistance during 1972-73 This Scheme was sanctioned in December 1973 as per stripulations of the HUDCO and the work was actually started in July 1975 after observing necessary formalities.

As per the Notification issued by the Karnataka Housing Board, the cost of MIG. House was to be Rs. 34,500 LIG. House Rs 19,000 and EWS. House Rs. 9,500 plus interest in all cases.

The work was scheduled to be taken up in three phases. Ist Phase 270, II Phase 275 and III Phase 275. In respect of the I Stage the Contractor backed out after sometime. Lateron, during

actual execution on an inspection by the Chief Engineer, Karnataka Housing Board, it transpired that the foundation prescribed in the original estimate were found to be insufficient and the specification were again revised. This resulted in revision of the estimated cost of EWS. House to Rs. 12,000 a LIG. House Rs. 17,500 and Rs. 32,500 for MIG. Houses.

Again during August 1975, during the execution Clayee soil was met with at a depth of 9 feet and a soil Mechanic Expert of the Visveswaraiah Engineering College was consulted after conducting tests. According to his advice for a safe foundation, the estimates were again revised costing Rs. 16,300 for a EWS. House. Rs. 23,600 for a LIG. House and Rs. 40,000 for a MIG. House.

In response to the notification of the Housing Board inviting tenders for their 2nd and 3rd phase there was very poor response from the Contractors and after negotiations, the construction work was fixed during 1976 and the work was in progress.

During my visit to Hassan, the delay in the Execution of the project and the difficulties faced by the depositors was brought to my notice by Shri Hanume Gowda, MLA. and imm diately on 16-7-1980 I convened a meeting in my Chambers to discuss the problems. In this meeting Sri Hanume Gowda, Hon'ble MLA.. the Railway Representatives, the PWD. authorities, the Deputy Secretary to Government, PWD., the National Highway representatives were present and the problems dogging the project were discussed in detail and project dates were fixed for completion of the project. The fast execution work was thus accelerated and quickened.

Breaching of Beeranahally Tank, the reconstruction of Railway Bridge, Construction of National Highway Bridge, increasing the vent way of Hassan-Beeranahally Road Bridge and widening of the Channapatna Tank ways were other items of work very necessary for ensuring proper drainage from the site area, and remove the marshi defects. The cost of the house therefore ultimately and provisionally fixed as follows.

EWS. House Rs. 34,360
LIG. House Rs. 54,684
MIG. House Rs. 91,587

The following are the reasons attributable for the increase in the cost of the House.—

a) Due to enhanced compensation paid to the land owners.

b) Extra cost due to extra depth of foundation and treatment.

c) Due to allied works such as breaching of tank and reconstruction of Railway Bridge, Construction of National High Way Bridge, and increasing in the ventway of Hassan–Bellikere bridge and widening the waste weir of Channapatna tank, amounting to Rs. 13.00 lakhs.

The one sailent feature, however, to be noted here that these Houses have larger plinth area then similar houses in similar other projects. EWS. House 3.65 Sq. an against 1.79 Sq. LIG. House 5.6 Sq. against 2.93 Sqs. and MIG House 9.91 Sqs. against 6.31 Sqs. The entire matter is being sortedout.

† ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ೧೯೭೨–೭೩ರಲ್ಲಿ ಈ ಯೋಜನೆ ಪ್ರಾರಂಭವಾಯಿತು. ಇಂದಿಗೆ ಹತ್ತು ವರ್ಷಗಳಾದರೂ ಕೂಡ ಯೋಜನೆ ಪೂರ್ಣವಾಗಿ ಕಾರ್ಯಾತ್ಮಕವಾಗಿಲ್ಲ. ಆಗ ಒಂದು ಮನೆಗೆ ಏನು ಚಾರ್ಜ್ ಬೀಳುತ್ತಿತ್ತು. ಈಗ ಅದರ ಮೂರರಷ್ಟು ಆಗಿರುತ್ತದೆ. ಉದಾಹರಣೆಗೆ ಹೇಳುವುದಾದರೆ, ಇ.ಡಬ್ಲ್ಯೂ.ಎಸ್. ೧೨ ಸಾವಿರ ಮನೆಗಳಿಗೆ ರಿವೈಸ್ಡ್ ರೇಟ್ಸ್ ಪ್ರಕಾರ ೩೪.೨೬ ರೂಪಾಯಿಗಳು ಎಲ್.ಐ.ಜಿ ಹೌಸ್ ೧೭,೫೫೦ ಇದ್ದುದು ಈಗ ೫೪,೬೮೪ ರೂಪಾಯಿಗಳು. ಎಂ.ಐ.ಜಿ. ೩೭ ಸಾವಿರ ರೂಪಾಯಿಗಳು ಇದ್ದುದು, ಈಗ ೯೦ ಸಾವಿರ ೫೮೭ ರೂಪಾಯಿಗಳ ರೇಟ್ ಆಗಿದೆ ಎಂದು ಟೆಂಟೇಟೀವ್ ಆಗಿ ತಿಳಿಸಿದ್ದಾರೆ ಇದು ಫೈನಲ್ ಆಗುವವರೆಗೆ ತಾವು ಹೇಳುವ ಪ್ರಕಾರ ಎಂ.ಐ.ಜಿ. ಒಂದು ಲಕ್ಷಕ್ಕೆ ಹೋಗುವುದು, ಎಲ್.ಐ.ಜಿ. ೬೦ ಸಾವಿರಕ್ಕೆ ಹೋಗುವುದು. ಇ.ಡಬ್ಲ್ಯೂ.ಎಸ್ ೪೦ ಸಾವಿರ ರೂಪಾಯಿಗಳ ಮೇಲೆ ಹೋಗುತ್ತದೆ. ನಾವು ಈ ಬಗ್ಗೆ ಕೇಳಿ ತಿಳಿದುಕೊಂಡಿರುತ್ತೇವೆ. ಸ್ವಾಮಿ, ಈ ೧೦ ವರ್ಷಗಳ ಹಿಂದೆ ಇದ್ದಂಥ ಪರಿಸ್ಥಿತಿ ಈಗ ಇಲ್ಲ, ಅವರವರ ಶಕ್ತಾನುಸಾರವಾಗಿ ಎಷ್ಟು ಹಣವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೋ ಅಷ್ಟು ಹಣವನ್ನು ಡಿಫಾಸಿಟ್ ಮಾಡಿರುತ್ತಾರೆ. ಮನೆಗಳು ಸಿಕ್ಕುತ್ತದೆ ಎಂಬ ನಿರೀಕ್ಷಣೆಯಿಂದ ಜನರು ಕಾಯುತ್ತಿದ್ದಾರೆ. ಈಗ ಏಕಾ–ಏಕಿ ಒಂದಕ್ಕೆ ಮೂರರಷ್ಟು ಮಾಡಿರುವುದರಿಂದ ಬಹುಶಃ ೧೦೦ಕ್ಕೆ ೯೦ ಭಾಗ ಯಾರು ಮನೆಗಳಿಗೆ ಅಪ್ಲೆ ಮಾಡುವುದಕ್ಕೆ ಹೋಗುವುದಿಲ್ಲ. ಇದಕ್ಕೆ ಮಾನ್ಯ ಸಚಿವರು ಎರಡು ಮೂರು ಕಾರಣಗಳನ್ನು ಹೇಳಿದ್ದಾರೆ. ಇದಕ್ಕೆ ಯಾರು ಕಾರಣರು, ತಪ್ಪು ಯಾರು ಮಾಡಿರುತ್ತಾರೆ ಎಂಬುದನ್ನು ಊಹಿಸಿ ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಬೇಕೇ ಏನಃ ಯೋಜನೆಯನ್ನು ಪ್ರಾರಂಭಮಾಡಿ, ಗೆಜೆಟ್ ನೋಟಿಫಿಕೇಷನ್ ಆಗಿ ಟೆಂಡರ್ ಕರೆದು ಕಂಟ್ರಾಕ್ಟ್ ಕೊಟ್ಟು ಆದೆಲ್ಲ ಆದಮೇಲೆ ಏಕಾಏಕಿ ಮೂರರಷ್ಟು ಹಣವನ್ನು ಹೆಚ್ಚಿಸುವುದು ಸರ್ಕಾರಕ್ಕೆ ಸಾದುವಾದುದಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ ಅನೇಕ ಜನ ಮನೆಗಳಿಗೆ ದುಡ್ಡನ್ನು ಕಟ್ಟಿರುವವರು ೧೦೦ಕ್ಕೆ ೬೦ ರಷ್ಟು ಭಾಗ ವಾಪಸ್ ತೆಗೆದುಕೊಳ್ಳಲಂ ಹವಣಿಸುತ್ತಿದ್ದಾರೆಂದು ಕೇಳಿ ತಿಳಿದುಕೊಂಡಿರುತ್ತೇನೆ. ಈ ಯೋಜನೆಯನ್ನು ಪ್ರಾರಂಭ ಮಾಡಿರುವ ಉದ್ದೇಶ ಏನಂ ಎಂದರೆ ಬಡವರಿಗೆ, ಚೈತನ್ಯವಿಲ್ಲದವರಿಗೆ, ಮನೆಗಳು ಬಾಡಿಗೆಗೆ ಸಿಕ್ಕದವರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಈ ಯೋಜನೆಯನ್ನು ಪ್ರಾರಂಭ ಮಾಡಿದ್ದು ಈಗ ಆಗಿರತಕ್ಕಂಥ ರೇಟನ್ನು ನೋಡಿದರೆ ಯಾರು ಶ್ರೀಮಂತರು, ಯಾರು ಹಣವಂತರು, ಯಾರು ದುಡ್ಡನ್ನು ಇಟ್ಟುಕೊಂಡಿರುತ್ತಾರೆ ಅಂಥವರಿಗೆ ಅನುಕೂಲವಾಗುತ್ತಿದೆ, ಆದ್ದರಿಂದ ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ. ಈಗಲೂ ಕೂಡ ಬೇರೆ ಯಾವುದೇ ಒಂದು ವ್ಯವಸ್ಥೆಯನ್ನು ಮಾಡಿ ಮನೆಗಳಿಗೆ ಒಂದಕ್ಕೆ ಮೂರರಷ್ಟು ರೇಟ್ ಹೆಚ್ಚು ಮಾಡಿರುವುದನ್ನು ಕಡಿಮೆ ಮಾಡಿ. ಕಡಿಮೆ ರೇಟ್‌ನಲ್ಲಿ ಮನೆಗಳನ್ನು ಒದಗಿಸುವುದಕ್ಕೆ ಸರ್ವಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ, ಮತ್ತೆ ಬೀರನಹಳ್ಳಿ ಕೆರೆಯ ವೇಸ್ಟ್ ಜಾಗ

---

† Indicates that remarks or speeches have not been revised by the member concerned.

ವನ್ನು ಒಡೆಸಿ ಹೌಸಿಂಗ್‌ಬೋರ್ಡ್‌ನವರಿಗೆ ಜಾಗವನ್ನು ಸರ್ಕಾರದವರು ಕೊಟ್ಟಿರುತ್ತಾರೆಂದು ತಿಳಿದು ಕೊಂಡಿದ್ದೇನೆ. ಮಾನ್ಯ ಸಚಿವರು ಒಂದು ಸಾರಿ ಮಾತನಾಡುತ್ತಾ, ಸೈಟ್‌ಗಳನ್ನೆಲ್ಲ ಹಂಚಿದ ಆಮೇಲೆ ಹೆಚ್ಚಿನ ಹಣ ಬಂದಲ್ಲಿ ರೇಟ್ ಕಡಿಮೆ ಮಾಡುವುದಕ್ಕೆ ಅವಕಾಶವಿದ್ದರೆ ಮಾಡುತ್ತೇವೆಂದು ನನ್ನ ಹತ್ತಿರ ತಿಳಿಸಿದ್ದರು. ಅದನ್ನೇನಾದರೂ ಕಾರ್ಯಗತ ಮಾಡುವುದಕ್ಕೆ ಸಾಧ್ಯವೇ ದಯವಿಟ್ಟು ಮಾನ್ಯ ಸಚಿವರು ಈ ತಿಳಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಅಲ್ಲದೇ ಅಲ್ಲಿ ಆಗಿರತಕ್ಕ ಕೆಲಸ ಆಪ್ಟೊಂದು ಸಮರ್ಪಕವಾದ ರೀತಿಯಲ್ಲಿ ಆಗಿಲ್ಲವೆಂದು ನನಗೆ ದೂರು ಬಂದಿದೆ. ಮಾನ್ಯ ಸಚಿವರು ಅಲ್ಲಿಗೆ ಬಂದ ಮೇಲೆ ಕೆಲವು ಉತ್ತಮವಾದ ಕೆಲಸಗಳು ಆಗಿವೆ ; ನ್ಯಾಷನಲ್ ಹೈವೇ ಬ್ರಿಡ್ಜ್ ಆಗಿದೆ, ರೈಲ್ವೆ ಬ್ರಿಡ್ಜ್ ಆಗಿದೆ ; ಆದರೂ ಈ ಮನೆಗಳ ಕೆಲಸ ಅರ್ಧಂಬರ್ಧ ಆಗಿದೆ. ಉಳಿದ ಕೆಲಸಗಳು ಬೇಗ ಆಗುವಂತೆ ಏರ್ಪಾಡು ಮಾಡಬೇಕು. ಎಲೆಕ್ಟ್ರಿಫಿಕೇಶನ್‌ಗೆ ಉಪಯೋಗಿಸತಕ್ಕಂತಹ ಸಾಮಾನುಗಳು ಸಬ್ ಸ್ಟ್ಯಾಂಡರ್ಡ್ ಮೆಟೀರಿಯಲ್ಸ್ ಆಗದೆ ಬಹುಶಃ ಈಗಾಗಲೇ ಕಿತ್ತುಹೋಗಿವೆ ಎಂದು ನನಗೆ ಅನೇಕ ಜನರು ಹೇಳಿದ್ದರು. ಮಾನ್ಯ ಸಚಿವರು ಅವರು ಸಹ ಹೋಗಿ ನೋಡಲಿ. ಇಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿಗಳನ್ನು ಕಳುಹಿಸಿ ಸಬ್ ಸ್ಟ್ಯಾಂಡರ್ಡ್ ಮೆಟೀರಿಯಲ್ಸ್‌ಗಳನ್ನು ಉಪಯೋಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಇನ್ನೊಂದು ದೂರು ಬಂದಿದೆ, ಈ ಪ್ಲಾನನ್ನು ಹೌಸಿಂಗ್‌ಬೋರ್ಡ್‌ನವರು ಶುರು ಮಾಡಿರುತ್ತಾರೆ ಅವರಲ್ಲಿ ಹಣಕ್ಕೆ ಕೊರತೆ ಇಲ್ಲ, ತಾತ್ಕಾಲಿಕ ಸಿಬ್ಬಂದಿಗೆ ಕೊರತೆ ಇಲ್ಲ ನಿಗದಿಯಾದ ವೇಳೆಗೆ ಕಂಟ್ರಾಕ್ಟ್ ವರ್ಕ್ಸ್ ಮುಗಿಸುವಂತೆ ಪರ್ಸುಯೇಷನ್ ಮಾಡಿ ಕಂಟ್ರಾಕ್ಟರುಗಳಿಂದ ಕೆಲಸಗಳನ್ನು ಕಂಪ್ಲೀಟ್ ಮಾಡಿದಿರುವುದರಿಂದ ಹತ್ತಾರು ವರ್ಷಗಳಿಂದ ಈ ಮನೆಗಳನ್ನು ಕಂಪ್ಲೀಟ್ ಮಾಡದೆ ಬಿಟ್ಟಿದ್ದು ಇದುವರೆಗೆ ಮನೆಗಳು ತಯಾರು ಆಗಿಲ್ಲ. ಕಂಪ್ಲೀಟ್ ಮಾಡದಿರುವುದಕ್ಕೆ ಕಾರಣ ಕಂಟ್ರಾಕ್ಟರುಗಳ ಮೇಲೆ ಸೂಪರ್‌ವಿಷನ್ ಇಲ್ಲ ಈಗ ರೇಟ್ ಜಾಸ್ತಿಯಾಗಿದೆ ಎನು ವ ಮಾತನ್ನು ಹೇಳುತ್ತೇನೆ. ಇವತ್ತು ಡಿವಿಜನ್‌ಗಳು, ಒಂದು ಡಿವಿಜನ್‌ನಲ್ಲಿ ಇಷ್ಟೂ ಕೆಲಸ ಮಾಡಬೇಕೆಂದು ನಿಗದಿ ಇದ್ದರೂ ಕೂಡ ಅಷ್ಟು ಪ್ರೋಗ್ರೆಸ್ ಮಾಡಿರುವುದಿಲ್ಲ ಅಂತಹ ಡಿವಿಜನ್‌ಗಳು ಕಂಟಿನ್ಯೂ ಆಗಿರುವುದರಿಂದ ಮನೆಗಳ ಮೇಲೆ ಅನ್‌ನೆಸೆಸರಿ ಓವರ್‌ಎಡ್ ಚಾರ್ಜ್‌ಸ್ ಬೀಳಲು ಅವಕಾಶವಾಗಿದೆ. ಮಾನ್ಯ ಸಚಿವರಂ ಇಡರ ಕಡೆಗೆ ಗಮನಕೊಡಬೇಕು. ಸಾಕಷ್ಟು ಕೆಲಸವಿಲ್ಲದ ಡಿವಿಜನ್‌ಗಳನ್ನು, ಇಲಾಖೆಯನ್ನು ರೀ ಆರ್ಗನೈಸ್ ಮಾಡಿ ಪರಿಣಾಮಕಾರಿಯಾದಂತಹ ಕೆಲಸ ಆಗುವುದಾದರೆ ಹುಡ್ಕೋ ಸ್ಕೀಮ್ ಒಂದೇ ಅಲ್ಲ ರಾಜ್ಯದ ಇತರೆ ಬೇರೆ ಬೇರೆ ಸ್ಕೀಮ್‌ಗಳಲ್ಲೂ ಕೂಡ ಕಡಿಮೆ ರೇಟ್‌ನಲ್ಲಿ ಮನೆಗಳು ಸಿಗುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸಚಿವರು ಆ ಸದನಕ್ಕೆ ಒಂದು ಆಶ್ವಾಸನೆಯನ್ನು ಕೊಡಬೇಕಂ. ೧ ರಿಂದ ಮೂರರಷ್ಟು ಮನೆಗಳ ರೇಟ್ ಜಾಸ್ತಿಯಾಗಿರುವುದರಿಂದ ಅದನ್ನು ಯಾವರೀತಿ ಕಡಿಮೆ ಮಾಡುತ್ತೀರಿ ? ಮನೆಗಳನ್ನು ಫೈನಲ್ ಆಗಿ ಎಷ್ಟು ರೇಟಿಗೆ ಕೊಡುತ್ತೀರಿ ? ಎಂಬುದನ್ನು ಮಾನ್ಯ ಸಚಿವರು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಬಿ. ಎಚ್. ಲಕ್ಷ್ಮಣಯ್ಯ (ಬೇಲೂರು).—ಮಾನ್ಯ ಅಧ್ಯಕ್ಷರೇ, ಹೌಸಿಂಗ್ ಬೋರ್ಡ್‌ನವರು ಮನೆಗಳನ್ನು ಕಟ್ಟುವಾಗ, ನೋಟಿಫಿಕೇಷನ್ ಮಾಡುವಾಗ, ಅಪ್ಲಿಕೇಷನ್ ಕರೆಯುವಾಗ ಇಷ್ಟು ಟೈಮ್‌ಗೆ ಮನೆಗಳನ್ನು ಕಟ್ಟುತ್ತೇವೆಂದು ಇಷ್ಟು ಆರ್ನೆಸ್ಟ್ ಅಮೌಂಟ್ ಡಿಪಾಸಿಟ್ ಮಾಡಬೇಕು ಎಂದು ಅನೌನ್ಸ್ ಮಾಡಿರುತ್ತಾರೆ. ಆದರೆ ಈಗ ಮನೆಗಳನ್ನು ಕಟ್ಟುವುದಕ್ಕೆ ಸರ್ಕಾರದವರೇ ೧೦ ವರ್ಷ ಮಾಡಿ, ಈಗ ರೇಟ್ ಜಾಸ್ತಿಯಾಗಿದೆಂದು ಹೇಳುವುದರಲ್ಲಿ ಅರ್ಥವೇನಿದೆ ? ಸರ್ಕಾರದವರು ಇನ್‌ಟ್ರೆವೆಂಗೆ ಹಣ ಕಟ್ಟಿದ್ದಿದ್ದರೆ ಯಾವ ಅಪ್ಲಿಕೇಷನ್‌ಗೂ ಮನೆ ಸ್ಯಾಂಕ್ಷನ್ ಮಾಡುವುದಿಲ್ಲ. ಜನಗಳು ಕಟ್ಟಿರುವ ದುಡ್ಡಿಗೆ ಒಡ್ಡಿ ಏಷ್ಟಾಗುತ್ತದೆ ? ಇಂತಹ ಇನ್‌ಕಂ ಗ್ರೂಪ್‌ನವರು ಇಷ್ಟು ಹಣ ಕಟ್ಟಬೇಕೆಂದು ಪಬ್ಲಿಷ್ ಮಾಡಿರುತ್ತಾರೆ. ಇವತ್ತು ೩ಳಿ ಸಾವಿರ ರೂಪಾಯಿಗಳಿಗೆ ೯೧ ಸಾವಿರ ರೂಪಾಯಿಗಳು ಆದರೆ ಅವರ ಇನ್‌ಕಂ ಜಾಸ್ತಿಯಾಗುತ್ತದೆಯೆ ? ಕಡಿಮೆ ಇನ್‌ಕಂ ಇರುವವರು ಕಡಿಮೆ ಇನ್‌ಕಂ ಗ್ರೂಪಿಗೆ ಸೇರಿದ ಮನೆಗೆ ಅರ್ಜಿ ಹಾಕಿಕೊಂಡಿರುತ್ತಾರೆ. ಈಗ ಮನೆಗಳ ರೇಟನ್ನು ಮೂರರಷ್ಟು ಜಾಸ್ತಿ ಮಾಡಿರುತ್ತಾರೆ. ಅವರು ಇನ್‌ಕಂ ಜಾಸ್ತಿಯಾಗಿರುತ್ತದೆಯೆ ? ಫೌಂಡೇಷನ್ ಭದ್ರವಾಗಿಲ್ಲವೆಂದು ಇಂಜಿನಿಯರ್‌ಗಳು ಪುನಃ ಎಕ್ಸಾಮಿನ್ ಮಾಡಿ ರೇಟನ್ನು ರಿವೈಸ್ ಮಾಡಿದರು ಎಂದು ಹೇಳಿದ್ದಾರೆ. ಈ ಕೆಲಸ ತೆಗೆದುಕೊಳ್ಳುವುದಕ್ಕೆ ಮುಂಚೆ ತಮ್ಮ ಇಂಜಿನಿಯರ್‌ಗಳು ಅನ್‌ಕ್ವಾಲಿಫೈಡ್ ಪೀಪಲ್ ಆಗಿದ್ದರಾ ? ಅವರು ಅದನ್ನು ಏತಕ್ಕೆ ಯೋಚನೆ ಮಾಡಿಲಿಲ್ಲ. ಅದನ್ನು ಪರೀಕ್ಷೆ ಮಾಡಲಿಲ್ಲ ಅಂದರೆ ಅದರ ಹೊರೆಯನ್ನು ನಿಮ್ಮ ಇಂಜಿನಿಯರ್‌ಗಳು ಹೊರಬೇಕು. ತಪ್ಪು ಮಾಡಿರುವ

ಇಂಜಿನಿಯರ್‌ಗಳು ಈ ಹೊರೆಯನ್ನು ಹೊತ್ತುಕೊಳ್ಳಬೇಕು. ಇದನ್ನು ಸರ್ಕಾರ ವಿಚಾರ ಮಾಡಬೇಕು. ಸರ್ಕಾರ ಏನು ಮಾಡಿದರೂ ಜನ ಕೊಡುತ್ತಾರೆ ಎನ್ನುವಷ್ಟಕ್ಕೆ ಭಾವನೆ. ಏನಿದೆ ಅದಕ್ಕಿಂತ ಹೆಚ್ಚಾಗಿ ನಿಮ್ಮ ಜವಾಬ್ದಾರಿ ಜಾಸ್ತಿ ಇದೆ. ೩೪ ಸಾವಿರ ರೂಪಾಯಿಗಳಿಗೆ ಮನೆಯನ್ನು ಕಟ್ಟುತ್ತೇವೆಂದು ಹೇಳಿ–ಈಗ ೧೦ ವರ್ಷಗಳಾದ ಮೇಲೆ ೯೧ ಸಾವಿರ ಮಾಡಿದ್ದೀರಿ. ಇದನ್ನು ಆದಷ್ಟು ಕಡಿಮೆ ಮಾಡಬೇಕು. ಆ ಹಣವನ್ನು ಕಟ್ಟಲೇಬೇಕಾಗಿದ್ದರೆ ಕಂತುಗಳಲ್ಲಿ ಕಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

† ಶ್ರೀ ಎಚ್.ಎಲ್. ತಿಮ್ಮೇಗೌಡ (ಬಸವನಗುಡಿ) —ಮಾನ್ಯ ಅಧ್ಯಕ್ಷರೇ ಈ ಜಾಗವನ್ನು ನಾನು ಛೇರ್ಮನ್ ಆಗಿದ್ದಾಗ ಮುನಿಸಿಪಾಲಿಟಿಯಿಂದ ತೆಗೆದುಕೊಂಡಿದ್ದರು. ಮನೆಗಳನ್ನು ಕಟ್ಟುವುದಕ್ಕೆ ಹುಡ್ಕೋ ಸ್ಕೀಂನಿಂದ ದುಡ್ಡು ತೆಗೆದುಕೊಂಡು ಕೆಲಸ ಶುರು ಮಾಡಿರತಕ್ಕದ್ದು. ೧೯೭೫ನೇ ಇಸವಿ ಜುಲೈನಲ್ಲಿ ಎಂದು ಮಂತ್ರಿಗಳು ಹೇಳಿದ್ದಾರೆ. ೧೯೭೫ ರಿಂದ ಇಲ್ಲಿಯವರೆಗೆ ೭ ವರ್ಷಗಳ ಕಾಲ ಒಂದು ಸ್ಪೇಜ್ ಕೂಡ ಕಂಪ್ಲೀಟ್ ಆಗಿಲ್ಲ. ಇದು ಹೌಸಿಂಗ್ ಬೋರ್ಡ್‌ನವರಿಗಾಗಲೀ ಸರ್ಕಾರಕ್ಕಾಗಲೀ ಒಂದು ಗೌರವ ತರತಕ್ಕಂತಹ ಕೆಲಸವಲ್ಲ. ಈ ವೇಗದಲ್ಲಿ ಮನೆಗಳನ್ನು ಕಟ್ಟಿದರೆ ಮನೆಗಳನ್ನು ಕಂಪ್ಲೀಟ್ ಮಾಡುವುದಕ್ಕೆ ಆಗುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಮಂತ್ರಿಗಳು ತಿಳಿಸಿದ ಹಾಗೆ ಮನೆಗಳನ್ನು ಕಟ್ಟುವುದಕ್ಕೆ ಆರಂಭವಾದ ದಿವಸದಿಂದ ಎಷ್ಟೆಷ್ಟು ಕಂಟ್ರಾಕ್ಟರುಗಳಿಗೆ ಬಿಲ್ ಕೊಟ್ಟಿದ್ದೀರಿ, ಆ ಹಣಕ್ಕೆ ಯಾರು ಮನೆಗಳನ್ನು ಪಡೆದುಕೊಂಡಿರುತ್ತಾರೆ ಅವರ ಮೇಲೆ ಬಡ್ಡಿ ಹಾಕಿರುತ್ತೀರಿ. ೧೯೭೫ನೇ ಇಸವಿಯಲ್ಲಿ ೧೯ ಸಾವಿರದ ಮನೆಗೆ ೫ ಸಾವಿರ ಬಿಲ್ ಕೊಟ್ಟಿದ್ದರೆ ೫ ಸಾವಿರ ಬಿಲ್‌ಗೆ ೭ ವರ್ಷಗಳ ಬಡ್ಡಿಯನ್ನು ಅವನು ಕಟ್ಟಲೇಬೇಕು. ಬಡ್ಡಿ ಸೇರಿಸಿ ತಮ್ಮ ಹೇಳಿಕೆಯ ಪ್ರಕಾರ ೯ ಸಾವಿರ ರೂಪಾಯಿಗಳ ಮನೆ ಇವತ್ತು ೩೪ ಸಾವಿರ ರೂಪಾಯಿಗಳು ಆಗಿದೆ. ೧೯ ಸಾವಿರ ರೂಪಾಯಿಗಳ ಮನೆ ೫೪ ಸಾವಿರ ರೂಪಾಯಿ ಆಗಿದೆ. ೩೪ ಸಾವಿರ ರೂಪಾಯಿಗಳ ಮನೆ ಇವತ್ತು ೯೧ ಸಾವಿರ ರೂಪಾಯಿಗಳಾಗಿದೆ. ಮನೆಗಳನ್ನ ಕಟ್ಟಿ ಮುಗಿಸುವುದರೊಳಗೆ ಇನ್ನು ಎಷ್ಟಾಗುತ್ತದೋ ಗೊತ್ತಿಲ್ಲ. ಯಾವಾಗ ಮೊದಲನೆಯ ಸ್ಪೇಜನ್ನು ಮಂಗಿಸುತ್ತೀರಿ? ಅಲ್ಲಿ ರಸ್ತೆಯಾಗಿಲ್ಲ. ಅಂಡರ್ ಗ್ರೌಂಡ್ ಡ್ರೈನೇಜ್ ಆಗಿಲ್ಲ, ಎಲೆಕ್ಟ್ರಿಸಿಟಿ ವಾಟರ್ ಸಪ್ಲೈ ಆಗಿದೆ. ಮನೆಗಳನ್ನು ಯಾವಾಗ ಕಂಪ್ಲೀಟ್ ಮಾಡುತ್ತೀರಿ? ಮನೆಗಳನ್ನು ಮಾರಕ್ಕೆ ಯಾವಾಗ ಕೊಡುತ್ತೀರಿ ಎನ್ನುವಷ್ಟಕ್ಕಾದ್ದು ಇನ್ನೂ ಕೂಡ ತೀರ್ಮಾನವಾಗಿಲ್ಲ. ತಮ್ಮ ಚೇಂಬರಿನಲ್ಲಿ ಎಲ್ಲರನ್ನು ಕರೆದು ಮೀಟಿಂಗ್ ಮಾಡಿದ್ದೀರಿ. ಇಲ್ಲಿ ಒಂದು ಪ್ರಶ್ನೆ ಉದ್ಭವವಾಗುತ್ತದೆ. ನ್ಯಾಷನಲ್ ಹೈವೇ ಬ್ರಿಡ್ಜ್ ಕನ್ಸ್ಟ್ರಕ್ಟ್ ಮಾಡಬೇಕಾಗುತ್ತದೆ. ರೈಲ್ವೆ ಬ್ರಿಡ್ಜ್ ರೀಕನ್ಸ್ಟ್ರಕ್ಟ್ ಮಾಡಬೇಕಾಗುತ್ತದೆ, ವೇಸ್ಟ್‌ವೇರ್ ಬದಲಾಯಿಸಬೇಕಾಗುತ್ತದೆಂಬುದನ್ನು ಮೊದಲು ಎಸ್ಟಿಮೇಟ್ ಮಾಡುವಾಗ ಹೌಸಿಂಗ್ ಬೋರ್ಡ್‌ನವರಿಗೆ ಗೊತ್ತಿರಲಿಲ್ಲವೆ? ಗೊತ್ತಿದ್ದರೂ ಕೂಡ ಈ ಎಸ್ಟಿಮೇಟ್ ಮಾಡಿ ಮನೆಗಳನ್ನು ಕಡಿವೇ ದುಡ್ಡಿಗೆ ಕೊಡುತ್ತೇವೆಂದು ಏತಕ್ಕೋಸ್ಕರ ಹೇಳುವುದಕ್ಕೆ ಹೋದರು? ಇದನ್ನು ಕೂಡ ಪರಿಶೀಲನೆ ಮಾಡಿ ಇದಕ್ಕೆ ಯಾರು ಕಾರಣಕರ್ತರು ಆಗಿದ್ದಾರೆ ಎಂಟು ವರ್ಷ ಡಿಲೇ ಆಗುವುದಕ್ಕೆ ಯಾರು ಕಾರಣರಾಗಿದ್ದಾರೆ ಅವರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಹೌಸಿಂಗ್ ಬೋರ್ಡ್‌ನವರಿಗೆ ಒಳ್ಳೆಯ ಹೆಸರು ಬರುವುದಿಲ್ಲ. ಅದನ್ನು ಪರಿಶೀಲನೆ ಮಾಡಬೇಕು. ನಾನು ಇನ್ನೊಂದು ಸಲಹೆ ಕೊಡುವುದಕ್ಕೆ ಇಷ್ಟ ಪಡುತ್ತೇನೆ. ಮನೆಗಳನ್ನು ಕಟ್ಟುವುದಕ್ಕೆ ಮೊದಲೇ ಇಷ್ಟು ಮನೆಗಳನ್ನು ಕಟ್ಟುತ್ತೇವೆ ಇಷ್ಟು ದುಡ್ಡು ಆಗುತ್ತದೆಂದು ಹೇಳುವುದು ಸರಿಯಲ್ಲ. ಮೊದಲು ಹಾಗೆ ಇರಲಿಲ್ಲ. ಮನೆಗಳನ್ನು ಕಟ್ಟಿದ ಮೇಲೆ ಮನೆಗಳನ್ನು ಕಟ್ಟುವುದಕ್ಕೆ ಇಷ್ಟು ದುಡ್ಡು ಆಗಿದೆ ಇಷ್ಟು ದುಡ್ಡಿಗೆ ಅಲಾಟ್ ಮಾಡುತ್ತೇವೆಂದು ಅನೌನ್ಸ್ ಮಾಡುತ್ತಿದ್ದರು. ಅದನ್ನು ಬಿಟ್ಟು ಈಗ ಮೊದಲೇ ಅನೌನ್ಸ್ ಮಾಡುತ್ತಾರೆ ಮನೆಗಳನ್ನು ಕಟ್ಟುವುದಕ್ಕೆ ನಿಜವಾಗಿಯೂ ಹಣ ಖರ್ಚಾಗಿದ್ದರೂ ಕೂಡ ಎಂತಹವರು ಕೂಡ ಏತಕ್ಕೆ ಆಗುತ್ತದೆ ಎನ್ನುವಷ್ಟಕ್ಕೆ ಸಂಶಯ ಬರುತ್ತದೆ. ನೀವು ಮನೆಗಳಿಗೆ ಅರ್ಜಿಯನ್ನು ಕರೆಯುತಕ್ಕ ಕಾಲದಲ್ಲಿ ಇಷ್ಟು ಮನೆಗಳನ್ನು ಕಟ್ಟುತ್ತೇವೆಂದು ಹೇಳುವುದಕ್ಕೆ ಬದಲಾಗಿ ಇಷ್ಟು ಮನೆಗಳನ್ನು ಕಟ್ಟಿದ್ದೇವೆ ಎಕಾನಮಿಕ್ ವೀಕರ್ಸ್ ಸೆಕ್ಷನ್‌ಗೆ ಇಷ್ಟು ದುಡ್ಡಾಗುತ್ತದೆ. ಮಿಡಲ್ ಇನ್‌ಕಂ ಗ್ರೂಪಿಗೆ ಇಷ್ಟಾಗುತ್ತದೆ. ಲೋ ಇನ್‌ಕಂ ಗ್ರೂಪಿಗೆ ಇಷ್ಟಾಗುತ್ತದೆಂದು ಅನೌನ್ಸ್ ಮಾಡತಕ್ಕದ್ದು ಒಳ್ಳೆಯದು. ಮೊದಲೇ ಅನೌನ್ಸ್ ಮಾಡುವುದರಿಂದ ನೀವು ಕಷ್ಟಕ್ಕೆ ಒಳಗಾಗುತ್ತೀರಿ. ಮನೆಗಳನ್ನು ಆದಷ್ಟು ಬೇಗ ಕಂಪ್ಲೀಟ್ ಮಾಡುತ್ತೀರಾ? ವಾಟರ್ ಸಪ್ಲೈ, ಅಂಡರ್ ಗ್ರೌಂಡ್ ಡ್ರೈನೇಜ್ ಸ್ಟ್ರೀಟ್‌ಲೈಟ್ ಯಾವಾಗ ಮಾಡುತ್ತೀರಿ? ಅದನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳಾದ ಶ್ರೀ ಹನುಮೇಗೌಡರು ಶ್ರೀ ಲಕ್ಷ್ಮಣಯ್ಯನವರು ಮತ್ತು ಶ್ರೀ ತಿಮ್ಮೇಗೌಡರು ಕೆಲವು ಮಾತುಗಳನ್ನು ಹೇಳಿದ್ದಾರೆ. ಅದನ್ನು ನಾನೂ ಕೂಡ ನನ್ನ ಉತ್ತರದಲ್ಲಿ ಒಪ್ಪಿದ್ದೇನೆ. ೧೯೭೩-೭೪ರಲ್ಲಿ ಜಾಗವನ್ನು ತೆಗೆದುಕೊಂಡಿದ್ದಾರೆ. ಸೈಟ್ ಸೆಲೆಕ್ಷನ್ ತಪ್ಪಾಗಿದೆ ಎಂದು ಸಾಕಷ್ಟು ಸಲ ಹೇಳಿದ್ದೇನೆ. ಲೋ ಏರಿಯಾದಲ್ಲಿ ಸೈಟ್ ಮಾಡಿದ್ದಾರೆ. ಸೆಲೆಕ್ಷನ್ ಮಾಡಿರುವ ಜಾಗದಲ್ಲಿ ನೀರು ಬರುತ್ತಿತ್ತು, ಹೈವೇ ಬ್ರಿಡ್ಜ್ ಮಾಡಬೇಕಾಗಿತ್ತು, ರೈಲ್ವೆ ಬ್ರಿಡ್ಜ್‌ಗೋಸ್ಕರ ೧೫ ಲಕ್ಷ ಖರ್ಚು ಮಾಡಬೇಕಾಗಿತ್ತು, ವೇಸ್ಟ್‌ವೇರ್ ಹಳ್ಳ ಮಾಡಬೇಕಾಗಿತ್ತು, ರಸ್ತೆ ಕೂಡ ಮಾಡಬೇಕಾಗಿತ್ತು. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ೧೯೭೩ರಿಂದ ಮಾಡುವುದಕ್ಕಾಗುವುದಿಲ್ಲವೆಂದು ಪೌಂಡೇಷನ್ ಮಾಡುವಾಗ ಕಂಟ್ರಾಕ್ಟರುಗಳು ಹೈಕೋರ್ಟಿಗೆ ಸ್ಟೇ ಹೋದರು, ಸ್ಟೇ ಆಯಿತು, ಈಗ ಅದು ವೆಕೇಟ್ ಆಯಿತು. ೧೯೭೩ರಲ್ಲಿ ಕೆಲಸ ಶುರು ಮಾಡಿದ್ದಾರೆ. ನಾನು ಮಂತ್ರಿಯಾದ ಮೇಲೆ ಹಾಸನಕ್ಕೆ ಹೋದಾಗ ಜನರು ಬಂದು ಹೇಳಿದರು, ಶಾಸಕರು ಕೂಡ ಹೇಳಿದರು. ಮೊಟ್ಟ ಮೊದಲನೆಯದಾಗಿ ನೋಡಿದಾಗ ಅಲ್ಲಿಯವರೆಗೆ ಯಾವ ಕಾರ್ಯಕ್ರಮವೂ ಕೂಡ ಹೌಸಿಂಗ್ ಬೋರ್ಡ್‌ನವರಿಂದ ಆಗಿದ್ದು ಇಲ್ಲ. ನಾನು ಬಂದ ತಕ್ಷಣವೇ ರೈಲ್ವೆ ಮೆಂಬರ್ಸ್‌ನ್ನು ಕರೆಸಿ ಈ ರೈಲ್ವೆ ಬ್ರಿಡ್ಜ್ ಕಟ್ಟಿಸುವ ಸಲುವಾಗಿ ಮಾತನಾಡಿದೆ ಮತ್ತು ಇದಕ್ಕೆ ಬೇಕಾದ ಹಣವನ್ನು ಹೌಸಿಂಗ್ ಬೋರ್ಡಿನ ಮೂಲಕ ಪ್ರಪಾಜಿಟ್ ಮಾಡಿಸಿದೆ. ಈಗಾಗಲೇ ನಾನು ನನ್ನ ಉತ್ತರದಲ್ಲಿ ಹೇಳಿರುವಂತೆ ಈ ಕೆಲಸ ಮುಗಿದಿದೆ. ನ್ಯಾಷನಲ್ ಹೈವೇ ಬ್ರಿಡ್ಜ್ ಕೆಲಸ ಮುಗಿದಿದೆ ಮತ್ತು ಇಲ್ಲಿಯವರೆಗೆ ಳಳಜಿ ಮನೆಗಳ ಕೆಲಸ ಮುಗಿದಿದೆ. ಬೇರೆ ಮನೆಗಳ ಕೆಲಸವನ್ನು ೧೯೮೬ಕ್ಕೆ ಮುಗಿಸುತ್ತೇವೆ. ಇಂತಹ ತೊಂದರೆ ಬಂದಾಗ ಬೆಲೆ ಹೆಚ್ಚಾಗುವುದು ಸ್ವಾಭಾವಿಕ. ಇಲ್ಲಿ ಒಂದು ಸಮಾಧಾನದ ಅಂಶವೇನೆಂದರೆ, ಹಾಡ್ಕೋದವರು ಏನು ಒಂದು ಪ್ಲಿನ್ತ್ ಏರಿಯಾ ನಿಗದಿ ಮಾಡಿದ್ದಾರೆ ಅವಕ್ಕೂ ಜಾಸ್ತಿ ಪ್ಲಿನ್ತ್ ಏರಿಯಾ ಇಲ್ಲಿ ಮನೆ ಪಡೆದವರಿಗೆ ಸಿಕ್ಕಿದೆ. ಇದರ ಒಂದು ವಿವರಗಳನ್ನು ನನ್ನ ಸ್ಟೇಟ್‌ಮೆಂಟ್‌ನಲ್ಲಿ ಹೇಳಿದ್ದೇನೆ. ಮಾನ್ಯ ಹನುಮೇಗೌಡರು ಮೊದಲೇ ಹಣ ಕಟ್ಟಿದವರಿಗೆ ಈಗ ಜಾಸ್ತಿ ಹಣ ಕೊಡಬೇಕಾಗಿ ಬಂದಿದೆ ಎಂದು ಹೇಳಿದರು. ಕೆಲವೊಂದು ಕಾರಣಗಳಿಂದ ಇದು ಜಾಸ್ತಿಯಾಗಿದೆ. ಈಗ ಈ ಮನೆಗಳನ್ನು ಜಾಗ್ರತೆ ಕಟ್ಟಿ ಮುಗಿಸಲು ಗಮನ ಕೊಟ್ಟಿದ್ದೇವೆ. ಪೀನಲ್ ಇಂಟರೆಸ್ಟ್ ೬ ಪರ್ಸೆಂಟ್ ಮತ್ತು ೩ ಪರ್ಸೆಂಟ್ ಏನಿದೆ. ಇದನ್ನು ವೇವ್ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಇದರ ಜೊತೆಗೆ ಈ ಬ್ಯಾಂಕ್‌ನಲ್ಲಿರುವಂತಹ ಇತರೇ ಸೈಟ್‌ಗಳನ್ನು ಪರಾಜು ಮಾಡಿರುವುದರ ಮೂಲಕ ಬರುವಂತಹ ಹಣವನ್ನು ಸಹ ಈ ಹೆಚ್ಚಿಗೆ ಬರುವಂತಹ ಖರ್ಚಿಗೆ ಅಡ್ಜೆಸ್ಟ್ ಮಾಡಬೇಕೆಂದು ಹೇಳಿದ್ದೇವೆ. ಈ ರೀತಿಯಿಂದ ಸಾಧ್ಯವಾದಮಟ್ಟಿಗೂ ಈ ಜನರಿಗೆ ಸಹಾಯ ಮಾಡಬೇಕೆಂದು ಮಾಡಿದ್ದೇವೆ. ಈ ಮೊದಲು ಸೈಟ್ ಸೆಲೆಕ್ಟ್ ಮಾಡುವ ರೀತಿಯಲ್ಲಿ ತೊಂದರೆ ಬಂದ ಕಾರಣದಿಂದ ಈ ರೀತಿ ಆಯಿತೇ ಹೊರತು ಬೇರೆ ಯಾವ ಕಾರಣವೂ ಇಲ್ಲ. ಮೊದಲೇ ಸಮಗ್ರವಾಗಿ ವಿಚಾರ ಮಾಡಿ ಈ ಕೆಲಸ ಪ್ರಾರಂಭ ಮಾಡಬೇಕಾಗಿತ್ತು. ಈಗ ನಾವು ಎಲ್ಲ ರೀತಿಯ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ಲಕ್ಷ್ಮಣಯ್ಯ ಅವರು ಇಂಟರೆಸ್ಟ್ ಕಡಿಮೆ ಮಾಡಬೇಕು ಮತ್ತು ಇನ್‌ಸ್ಟಾಲ್‌ಮೆಂಟ್ ಹೆಚ್ಚು ಮಾಡಬೇಕೆಂದು ಹೇಳಿದ್ದಾರೆ. ನಾವು ಇನ್ನೊಂದು ಸಲ ಮಿಟಿಂಗ್ ಮಾಡಿ ಇವರಿಗೆ ಏನಾದರೂ ಸಹಾಯ ಮಾಡಬೇಕೆಂಬುದು ಕಂಡುಬಂದರೆ ವಿಶೇಷವಾಗಿ ಮಾಡುತ್ತೇವೆಂದು ಮತ್ತೊಂದು ಸಲ ತಮ್ಮ ಮೂಲಕ ಮಾನ್ಯ ಸದಸ್ಯರುಗಳಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

(iv) ವಿಷಯ: ನಾಲ್ಕನೇ ದರ್ಜೆ ನೌಕರರ ಸಂಘದ ಅಧ್ಯಕ್ಷರು ಹೂಡಿರುವ ಮುಷ್ಕರದ ವಿಚಾರ.

ಶ್ರೀ ಪಿ. ರಾಮದೇವ್. ಕರ್ನಾಟಕ ಸರ್ಕಾರದ ನಾಲ್ಕನೇ ದರ್ಜೆಯ ನೌಕರರ ಬೇಡಿಕೆಗಳ ಬಗ್ಗೆ ಮತ್ತು ಈ ನೌಕರರ ಸಂಘದ ಅಧ್ಯಕ್ಷರು ಆಮರಣಾಂತ ಉಪವಾಸ ಸತ್ಯಾಗ್ರಹ ಕೈಕೊಂಡಿರುವ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ತಮ್ಮ ಅಪ್ಪಣೆ ಮೇಲೆ ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತೇನೆ.—